**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 06.11.2024**

**ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ ಕೆ ಜೆ ವಕೀಲರಿಂದ**

ಲಾವಪ್ಪ ನನ್ನ ತಂದೆಯಾಗಿದ್ದು ಅವರು ಸುಮಾರು **18** ವರ್ಷಗಳ ಹಿಂದೆ ಮೃತ ಪಟ್ಟಿದ್ದು ದಿನಾಂಕ ನನಗೆ ನೆನಪಿಲ್ಲ. ನಾನು ಮದುವೆ ಆಗಿ ಸುಮಾರು **25** ವರ್ಷಗಳಾದವು. ನನ್ನ ಮದುವೆ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು . ಮೋಹನ್ ರಾಜ್ ನನ್ನ ಅಣ್ಣ. ಮೃತ ಪಟ್ಟು ಸುಮಾರು **15** ವರ್ಷ ಆಗಿರಬಹುದು. ನನ್ನ ಮದುವೆಯ ನಂತರ ನನ್ನ ತಂದೆ ಜೀವಂತ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ **2001** ಅಥವಾ **2002** ರಲ್ಲಿ ಮೃತಪಟ್ಟಿರಬಹುದು. ನನ್ನ ತಂದೆ ಮರಣಾ ನಂತರ ನನ್ನ ಅಣ್ಣ ಮೋಹನ ರಾಜ ಹೋರತುಪಡಿಸಿ ಬೇರೆ ಯಾರಿಗೂ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆದಕಾರಣ ದಾವಾಸ್ವತ್ತುಗಳ ಮೇಲೆ ನಮಗೆ ಪಾಲುದಾರಿಕೆಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದೇವಮ್ಮ ನವರು ಪ್ರತಿವಾದಿ **4** ರಿಂದ **6** ರವರ ತಾಯಿ ಅಲ್ಲ ಎಂದರೆ ಸರಿಯಲ್ಲ. ನಮಗೆ ಯಾವುದೆ ಹಕ್ಕು ಇಲ್ಲದಿದ್ದರೂ ಪ್ರತಿವಾದಿ **1** ಮತ್ತು **2** ರವರಿಗೆ ತೊಂದರೆ ನೀಡುವ ಉದ್ದೇಶದಿಂದ ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ